ಈ ಮೆಲ್ಕಂಡ ಪ್ರೋತ್ಸಾಹಧನದ ಜೊತೆಗೆ VHSNC meeting ಮತ್ತು ASHA PHC Monthly meeting ನಲ್ಲಿ ಭಾಗವಹಿಸುವ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನವನ್ನು ಪ್ರತ್ಯೇಕವಾಗಿ ನೀಡಲಾಗುತ್ತಿದೆ.

ಕ್ರಮ ಸಂಖ್ಯೆ	ಕಾರ್ಯಕ್ರಮಗಳು	ಕೇಂದ್ರ ಸರ್ಕಾರದ ಆಶಾ ಪ್ರೋತ್ಸಾಹಧನ	ರಾಜ್ಯ ಸರ್ಕಾರದ ಮ್ಯಾಚಿಂಗ್ ಗ್ರಾಂಟ್ಸ್ ಪ್ರೋತ್ಸಾಹಧನ	ಒಟ್ಟು ಪ್ರೋತ್ಸಾಹಧನ
01)	ವಿ.ಹೆಚ್.ಎನ್.ಡಿ (ಪ್ರಕರಣಕ್ಕೆ `200/– ನೀಡಲಾಗುವುದು).	`200/–	`200/–	`400/–
02)	ವಿ.ಎಚ್.ಎಸ್.ಎನ್.ಸಿ: (1 ಸಭೆಗೆ ತಿಂಗಳಿಗೆ `150/–)	`150/–	` 150/–	`300/–
03)	ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ಮಾಸಿಕ ಸಭೆಗಳಿಗೆ ಹಾಜರಾಗುವುದು (1 ಸಭೆಗೆ ತಿಂಗಳಿಗೆ `150/–)	`150/–	` 150/–	`300
04)	ಪ್ರಯಾಣ ಭತ್ಯೆ: (ಪ್ರತಿ ತಿಂಗಳು `200/)		`200/–	`200/–

ಆಶಾ ಕಾರ್ಯಕರ್ತೆಯರ ಸ್ವಯಂಪ್ರೇರಿತರಾಗಿ ಬಂದಿದ್ದು ಸಮುದಾಯದಿಂದ (VHSC) ಆಯ್ಕೆಗೊಂಡಿರುತ್ತಾರೆ. ಕೇಂದ್ರ ಸರ್ಕಾರದ ಎನ್.ಎಚ್. ಎಮ್ ಯೋಜನೆಯ ಮಾರ್ಗಸೂಚಿಗಳ ಅನುಸಾರ ಕಾರ್ಯ ನಿರ್ವಹಿಸುತ್ತಿದ್ದು. ಕಾರ್ಯಾಧಾರಿತ ಕರ್ತವ್ಯದ ಆಧಾರದ ಮೇಲೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಇವರಿಗೆ ಯಶಸ್ವಿನಿ ಯೋಜನೆಯಡಿಯಲ್ಲಿ "Medical Benefit" ಗಳನ್ನು ಇಡಲು ಪರೀಶಿಲನೆಯಲ್ಲಿದೆ. ಆಶಾ ಕಾರ್ಯಕರ್ತೆಯರಿಗೆ ಜನಶ್ರೀ ಭೀಮಾಯೋಜನೆ ವಿಸ್ತರಿಸುವ ವಿಷಯವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವ್ಯಾಪ್ತಿಗೆ ಬರುವುದಿಲ್ಲ.

ಇವರಿಗೆ ಎನ್,ಎಚ್.ಎಮ್. ಯೋಜನೆಯ ಮಾರ್ಗಸೂಚಿಗಳ ಅನುಸಾರ ಪ್ರೋತ್ಸಾಹಧನ ನೀಡಲಾಗುತ್ತಿದ್ದು, ಇವರು ಸಂಬಳವನ್ನು ಪಡೆಯದೆ ಇರುವುದರಿಂದ ಇವರು ಕನಿಷ್ಟ ವೇತನ ಕಾಯ್ದೆಗೆ ಹಾಗೂ ಪಿಂಚಣಿ ಸೌಲಭ್ಯಕ್ಕೆ ಒಳಪಡುವುದಿಲ್ಲ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ: ಮಾನ್ಯ ಅಧ್ಯಕ್ಷರೆ, ಏನು ಈ ಪ್ರೋತ್ಸಾಹಧನವನ್ನು ನೀಡುತ್ತಿದ್ದಾರೆ ಸರಿಯಾದ ವೇಳೆಗೆ ಅವರಿಗೆ ಸಿಗುತ್ತಿಲ್ಲ, ಅದರಿಂದ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆಮೇಲೆ ಜನಶ್ರೀ ಭೀಮಾ ಯೋಜನೆ ಕೂಡ ಅವರಿಗೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಮೊನ್ನೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತೆ ಆರೋಗ್ಯ ಸಚಿವರು ಅಲ್ಲಿಗೆ ಭೇಟಿ ಕೊಟ್ಟಾಗ ನಿಮ್ಮ ಅಧ್ಯಕ್ಷರಿಗೆ ಹೋರಾಟ ಮುನ್ನಡೆಸಿ ನಡೆಸುವ ಶಕ್ತಿಯನ್ನು ದೇವರು ನೀಡಬೇಕು ಎಂದು ಹೇಳಿದ್ದಾರೆ, ಪ್ರೋತ್ಸಾಹಧನವನ್ನು ಕೊಟ್ಟು ಒಳ್ಳೆಯ ನ್ಯಾಯ ಒದಗಿಸಿಕೊಡಬೇಕು.

ಡಾ.ಹೆಚ್.ಸಿ.ಮಹದೇವಪ್ಪ: ಇವರು ವೇತನ ವ್ಯಾಪ್ತಿಗೆ ಬರುವುದಿಲ್ಲ, ಹಾಗಾಗಿ ಈ ಎಲ್ಲಾ ಪ್ರಶ್ನೆಗಳು ಉದ್ಭವವಾಗುವುದಿಲ್ಲ.

9.ವಿಷಯ: ಕುಮಟಾ ಹೊನ್ನಾವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕರಾವಳಿ ದಂಡೆಯ ಪ್ರದೇಶದಲ್ಲಿ ಉಪ್ಪು ನೀರು ಕೃಷಿ ಭೂಮಿಗಳಿಗೆ

ನುಗ್ಗದಂತೆ ಖಾರ್ಲೆಂಡ್ ನಿರ್ಮಿಸಿದ್ದು ಈವರೆಗೂ ಅದರ ನಿರ್ವಹಣೆಯನ್ನು ಕೈಗೊಳ್ಳದಿರುವುದರಿಂದ ಆ ಪ್ರದೇಶದ ಜನರಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀಮತಿ ಶಾರದ ಮೋಹನ ಶೆಟ್ಟಿ (ಕುಮಟಾ): ಮಾನ್ಯ ಅಧ್ಯಕ್ಷರೆ, ಕರಾವಳಿ ದಂಡೆ ಪ್ರದೇಶದಲ್ಲಿ ವಾಸಿಸುವ ಜನರು ತಮ್ಮ ಜೀವನೋಪಾಯಕ್ಕೆ ಕೃಷಿಯನ್ನೇ ಅವಲಂಬಿಸಿದ್ದು ಆ ಭಾಗದ ಜನರ ಸಹಸ್ರಾರು ಕೃಷಿ ಭೂಮಿ ಇವತ್ತು ಉಪ್ಪು ನೀರನಿಂದಾಗಿ ಕೃಷಿ ಬೆಳೆಯನ್ನು ಬೆಳೆಯಲಾರದಂಥ ಪರಿಸ್ಥಿತಿ ಇದೆ, ಕಾರಣ ಖಾರ್ಲೆಂಡ್ ಸರಿ ಇಲ್ಲದಿರುವುದರಿಂದ. ಮುಂದಿನ ದಿವಸಗಳಲ್ಲಿ ಖಾರ್ಲೆಂಡ್ ಸರಿ ಮಾಡಿದರೆ ಮಾತ್ರ ನಮ್ಮ ಭಾಗದಲ್ಲಿ ರೈತರು ಕೃಷಿ ಮಾಡುವುದಕ್ಕೆ ಸಾಧ್ಯ. ಹಾಗೆ ಇವತ್ತು ಕೂಡ ನಮ್ಮ ಭಾಗದಲ್ಲಿ ಫೆಬ್ರುವರಿ, ಮಾರ್ಚ ಎಂದರೆ ಬಾವಿ ಮತ್ತು ಕೊಳವೆ ಬಾವಿಯಲ್ಲೂ ಕೂಡ ಉಪ್ಪು ನೀರು ಬರುತ್ತದೆ. ಖಾರ್ಲೆಂಡ್ ನಿರ್ಮಿಸಲು ಸಚಿವರು ಹೆಚ್ಚಿನ ಅನುದಾನವನ್ನು ನಮ್ಮ ಕಡೆಗೆ ಕೊಡಬೇಕು, ಹಾಗೆಯೇ ಶಾಶ್ವತ ಪರಿಹಾರ ಕೊಡಬೇಕೆಂದು ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಶಿವರಾಜ್ ಎಸ್.ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳಾದ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಖಾರ್ಲೆಂಡ್ (ಕ್ಷಾರಭೂಮಿ ಯೋಜನೆ) ಗಳನ್ನು ನಿರ್ಮಿಸಲಾಗಿದೆ. ಈ ತಾಲ್ಲೂಕುಗಳಲ್ಲಿ ಹರಿಯುವ ನದಿ ಮತ್ತು ಕೊಳ್ಳಗಳು ಸಮುದ್ರ ಸೇರುವ ಕಡೆಗಳಲ್ಲಿ ಮಳೆಗಾಲದಲ್ಲಿ ಮಳೆಯ ನೀರಿನ ಹರಿವು ಹೆಚ್ಚು ಇದ್ದಾಗ, ಸಮುದ್ರದಲ್ಲಿ ಉಂಟಾಗುವ ಉಬ್ಬರ ಹಾಗೂ ಇಳಿತಗಳಿಂದ ಅಕ್ಕಪಕ್ಕದ ಕೃಷಿ ಭೂಮಿಗೆ ಯಾವುದೇ ಪರಿಣಾಮವಾಗುವುದಿಲ್ಲ. ನವೆಂಬರ್ ತಿಂಗಳ ನಂತರ ಈ ನದಿ ಮತ್ತು ಕೊಳ್ಳಗಳಲ್ಲಿ ಹರಿಯುವ ನದಿ ನೀರು ಸಮುದ್ರ ಸೇರುವ ಪ್ರಮಾಣ ಪೂರ್ಣ ಕಡಿಮೆಯಾದಾಗ ಸಮುದ್ರದಲ್ಲಿ ಉಂಟಾಗುವ ಉಬ್ಬರದ ಸಮಯದಲ್ಲಿ ಇದೇ ನದಿ ಮತ್ತು ಹಳ್ಳದಲ್ಲಿ ಸಮುದ್ರದ ನೀರು ಹಿಮ್ಮುಖವಾಗಿ ನದಿಗಳಲ್ಲಿ ಹರಿಯುವುದರಿಂದ ನದಿ ಮತ್ತು ಹಳ್ಳದ ಅಕ್ಕಪಕ್ಕದ ಕೃಷಿ ಜಮೀನು

ಗಳಿಗೆ ಉಪ್ಪು ನೀರು ನುಗ್ಗಿ ಹಾಳಾಗುವುದನ್ನು ತಪ್ಪಿಸಲು ಈ ನದಿ ಮತ್ತು ಹಳ್ಳದ ದಂಡೆಗಳಿಗೆ ಅಕ್ಕಪಕ್ಕದ ಕೃಷಿ ಜಮೀನುಗಳಿಗೆ ಉಪ್ಪು ನೀರು ನುಗ್ಗಿ ಹಾಳಾಗುವುದನ್ನು ತಪ್ಪಿಸಲು ಈ ಸಲ ನದಿ ಮತ್ತು ಹಳ್ಳದ ಮಣ್ಣಿನ ಏರಿಯ ನಿರ್ಮಾಣ ಹಾಗು ಅದಕ್ಕೆ ಕಲ್ಲಿನ ರಿವೆಟಮೆಂಟ್ ನಿರ್ಮಾಣ ಹಾಗೂ ಅದರಲ್ಲಿ ಬರುವ ಸಣ್ಣ ಸಣ್ಣ ತೊರೆಗಳಿಗೆ ಕಲ್ವರ್ಟಗಳನ್ನು ನಿರ್ಮಿಸಿ, ಹಲಗೆಗಳನ್ನು ಅಳವಡಿಸಿ ಉಪ್ಪು ನೀರು ಬರುವುದನ್ನು ತಡೆಗಟ್ಟುವುದಲ್ಲದೇ, ಸಿಹಿ ನೀರು ಹಳ್ಳಗಳಲ್ಲಿ ಉಳಿದು ಕೃಷಿ ಭೂಮಿ ಹಾಳಾಗುವುದು ತಪ್ಪಿಸುವು ದಲ್ಲದೇ, ಜನ ವಸತಿ ಪ್ರದೇಶಗಳಲ್ಲಿರುವ ಕುಡಿಯುವ ನೀರಿನ ಬಾವಿ ಮುಂತಾದವುಗಳ ನೀರು ಉಪ್ಪಾಗದಂತೆ ತಪ್ಪಿಸಬಹುದಾಗಿದೆ.

ಕುಮಟಾ–ಹೊನ್ನಾವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರಾವಳಿ ಯಲ್ಲಿ 22 ಖಾರ್ಲೆಂಡ್‌ಗಳನ್ನು ನಿರ್ಮಿಸಿ ನಿರ್ವಹಣೆಯಲ್ಲಿರುತ್ತವೆ. ಅವುಗ ಳಲ್ಲಿ ಕೆಲವೊಂದು ಖಾರ್ಲೆಂಡಗಳು ಬಹಳ ಹಿಂದೆ ನಿರ್ಮಿಸಲಾಗಿದೆ. ಈ ಯೋಜನೆಗಳನ್ನು ಇತರೆ ಯೋಜನೆಗಳೊಡನೆ ಯೋಜನೇತರ ಅನುದಾನದಡಿ ಬಿಡುಗಡೆಯಾಗುವ ಅನುದಾನದಲ್ಲಿ ಆದ್ಯತೆಯ ಮೇಲೆ ನಿರ್ವಹಿಸಲಾಗುತ್ತದೆ.

ಈ ಕ್ಷಾರಭೂಮಿ ಯೋಜನೆಗಳನ್ನು 4176.50 ಹೆಕ್ಟೇರ್ ಕೃಷಿ ಭೂಮಿ ಪ್ರದೇಶಕ್ಕೆ ಉಪ್ಪು ನೀರು ನುಗ್ಗುವಿಕೆಯಿಂದ ತಡೆಗಟ್ಟಲು ನಿರ್ಮಿಸಲಾಗಿದೆ. ಪ್ರತಿವರ್ಷ ಸಣ್ಣ ನೀರಾವರಿ ಇಲಾಖೆಗೆ ಸಣ್ಣ ನೀರಾವರಿ ಯೋಜನೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಯೋಜನೇತರ ಲೆಕ್ಕಶೀರ್ಷಿಕೆ–2702 ಅಡಿ ಒದಗಿಸಲಾಗುವುದು ಅನುದಾನದಲ್ಲಿ, ಅನುದಾನದ ಲಭ್ಯತೆಯನ್ನು ಆಧರಿಸಿ ಈ ಯೋಜನೆಗಳಿಗೆ ದುರಸ್ತಿ ಮತ್ತು ನಿರ್ವಹಣೆಗಾಗಿ ಕಳೆದ 8 ವರ್ಷಗಳಲ್ಲಿ ಈ ಕೆಳಗಿನಂತೆ ವೆಚ್ಚ ಮಾಡಲಾಗಿದೆ.

ವರ್ಷ	ದುರಸ್ತಿ ಮತ್ತು ನಿರ್ವಹಣೆ ಮಾಡಲಾದ ಕಾಮಗಾರಿಗಳ ಸಂಖ್ಯೆ	ವೆಚ್ಚ (ರೂ.ಲಕ್ಷಗಳಲ್ಲಿ)
2006–07	9	6.38
2007–08	11	8.03

2008–09	8	4.95
2009–10	3	1.38
2010–11	7	9.50
2011–12	0	0
2012–13	0	0
2013–14	3	1.90
	ಒಟ್ಟು	**32.14**

ಇವುಗಳಲ್ಲಿ ಕೆಲವು ಸ್ಥಳದಲ್ಲಿ ಮಣ್ಣಿನ ಏರಿ ಹಾಳಾಗಿದ್ದು, ಅದರಲ್ಲಿ ಬರುವ ಸಿ.ಡಿ.ಕಾಮಗಾರಿಗಳು ಶಿಥಿಲಗೊಂಡಿರುವುದರಿಂದ, ಈ ಯೋಜನೆ ಗಳನ್ನು ವಾರ್ಷಿಕ ನಿರ್ವಹಣೆ ಅನುದಾನದಡಿ ಸುಸ್ಥಿಯಲ್ಲಿಡಲು ಸಾಧ್ಯವಾಗಿ ರುವುದಿಲ್ಲ. ಆದ್ದರಿಂದ ಈ ಭಾಗಗಳಲ್ಲಿ ಸಮುದ್ರದ ನೀರು ನುಗ್ಗಿ ಭಾಗಶಃ ಭೂಮಿ ಮಾತ್ರ ಕೃಷಿಗೆ ಬಳಸಾಲುಗುತ್ತಿದ್ದು ಹೆಚ್ಚಿನ ಕೃಷಿ ಭೂಮಿ ಉಪ್ಪು ನೀರಿ ನಿಂದ ಜಲಾವೃತವಾಗಿರುತ್ತದೆ. ಅದಕ್ಕಾಗಿ ಈ ಖಾರ್ಲೆಂಡಗಳನ್ನು ಸುಸ್ಥಿತಿ ಯಲ್ಲಿಡಲು ಮಣ್ಣಿನ ಏರಿ ದುರಸ್ತಿ ಮಾಡುವುದರಿಂದ ಹಾಗೂ ಕಲ್ವರ್ಟಗಳಿಗೆ ಅಳವಡಿಸಿರುವ ಮರದ ಹಲಗೆಗಳ ಬದಲಾಗಿ ಸುಧಾರಿತ ಗೇಟುಗಳನ್ನು ಅಳವಡಿಸಿ ನಿರ್ಮಿಸುವುದರಿಂದ ಉಪ್ಪು ನೀರು ಕೃಷಿ ಭೂಮಿಗೆ ನುಗ್ಗುವುದನ್ನು ತಡೆಗಟ್ಟಬಹುದಾಗಿರುತ್ತದೆ ಹಾಗೂ ಕುಡಿಯುವ ಬಾವಿಗಳಲ್ಲಿ ಸಿಹಿ ನೀರು ಮತ್ತು ಅಂತರ್ಜಲ ವೃದ್ಧಿಗೆ ಸಹಾಯವಾಗುತ್ತದೆ.

ಮಾನ್ಯ ಅಧ್ಯಕ್ಷರೆ, ಆ ಖಾರ್ಲೆಂಡ್ 1974ರಲ್ಲಿ ನಿರ್ಮಾಣವಾಗಿರುವು ದರಿಂದ ಪ್ರತಿಸಾರಿ ಉಪ್ಪು ನೀರು ಬಂದು, ಮೊದಲು ಕಬ್ಬಿಣದ ಗೇಟ್ ಅನ್ನು ಹಾಕಿದ್ದೆವು ಇವತು ಆ ಗೇಟು ಕೆಡುವಂಥ ಪರಿಸ್ಥಿತಿ ಬಂತು. ನಂತರ ಹಲಗೆಯದನ್ನು ಮಾಡಿದೆವು, ಅದು ಮಣ್ಣಿನ ಪ್ರದೇಶ ಸ್ವಲ್ಪ ಕೆಡುವಂಥ ಪರಿಸ್ಥಿತಿ ಇದೆ. ಈಗ ಅವರಿಗೆ ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ. ಆ ಭಾಗಕ್ಕೆ ಕೃಷಿ ಮತ್ತು ಕುಡಿಯುವ ನೀರಿಗೆ ತೊಂದರೆಯಾಗದಂತೆ ಲೆಕ್ಕಶೀರ್ಷಿಕೆ

2072ದಲ್ಲಿ ಹಂತ ಹಂತವಾಗಿ ಅದಕ್ಕೆ ಅನುದಾನವನ್ನು ಕೊಟ್ಟು ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀಮತಿ ಶಾರದ ಮೋಹನ ಶೆಟ್ಟಿ: 1974ರಲ್ಲಿ ಅದಾದ ಮೇಲೆ ಇದುವರೆವಿಗೂ ಸರಿಯಾಗಿ ಯಾವೂದೂ ಆಗಲೇ ಇಲ್ಲ. ಅದಕ್ಕಾಗಿ ಆದಷ್ಟು ಬೇಗ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

ಅಧ್ಯಕ್ಷರು: Active ಆಗಿ consider ಮಾಡಿ.

ಶ್ರೀ ಶಿವರಾಜ್ ಎಸ್.ತಂಗಡಗಿ: ಅದಕ್ಕೆ ಹಂತ ಹಂತವಾಗಿ ಅನುದಾನವನ್ನು ಕೊಟ್ಟು, ಪೂರ್ಣವಾಗಿ ದುರಸ್ತಿ ಮಾಡುವ ಕೆಲಸವನ್ನು ಮಾಡುತ್ತೇವೆ.

10. ವಿಷಯ: ಕೆ.ಬಿ.ಜಿ.ಎನ್.ಎಲ್. ವ್ಯಾಪ್ತಿಯಲ್ಲಿ ಬರುವ ಮುಡಬಾಳ ಶಾಖಾ ಕಾಲುವೆ ಹಾಗೂ ಇಂಡಿ ಶಾಖಾ ಕಾಲುವೆ ನವೀಕರಣ ಕಾಮಗಾರಿ ಕಳಪೆ ಮುಟ್ಟದ್ದಾಗಿರುವ ಬಗ್ಗೆ.

ಶ್ರೀ ಗುರು ಪಾಟೀಲ್ ಶಿರವಾಳ (ಶಹಾಪುರ): ಮಾನ್ಯ ಅಧ್ಯಕ್ಷರೆ ಕೆ.ಬಿ.ಜಿ.ಎನ್.ಎಲ್. ವ್ಯಾಪ್ತಿಯಲ್ಲಿ ಬರುವ ಮುಡಬಾಳ ಶಾಖಾ ಕಾಲುವೆ ಹಾಗೂ ಇಂಡಿ ಶಾಖಾ ಕಾಲುವೆ ನವೀಕರಣ ಕಾಮಗಾರಿ ಕಳಪೆ ಮಟ್ಟದ್ದಾಗಿರುವ ಬಗ್ಗೆ ಮಾನ್ಯ ಭಾರಿ ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ನಾರಾಯಣಪುರ ಎಡದಂಡೆ ಕಾಲುವೆ ಜಾಲದ ವ್ಯಾಪ್ತಿಯಡಿಯ ಮುಡಬಾಳ ಶಾಖಾ ಕಾಲುವೆ ಕಿ.ಮೀ. 0.00 ರಿಂದ 50.80 ಹಾಗೂ ಇಂಡಿ ಶಾಖಾ ಕಿ.ಮೀ. 0.00 ರಿಂದ 64.00 ರವೆರೆಗಿನ ಮುಖ್ಯ ಕಾಲುವೆ ಆಧುನೀಕರಣ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಅನುಮೋದಿತ ` 3,752.18 ಕೋಟಿ ಅಂದಾಜು ಮೊತ್ತದ ನಾರಾಯಣಪುರ ಎಡದಂತೆ ಕಾಲುವೆ ಜಾಲದ ಆಧುನೀಕರಣದ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಮುಖ್ಯ ಕಾಲುವೆ ಆಧುನೀಕರಣ ಕಾಮಗಾರಿಗಳನ್ನು

ಪ್ರಸಕ್ತ 2014ನೇ ಸಾಲಿನ ಕಾಲುವೆ ಕ್ಲೋಜರ್ ಅವಧಿಯಲ್ಲಿ ಅನುಷ್ಠಾನಗೊಳಿಸಿ ಪೂರ್ಣಗೊಳಿಸುವುದಾಗಿರುತ್ತದೆ. ಈ ವಿವರವಾದ ಯೋಜನಾ ವರದಿಗೆ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆಯಡಿ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಸಹ ದೊರೆತಿರುತ್ತದೆ. ಇದಲ್ಲದೆ ಈ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳುವ ಪೂರಕವಾಗಿ ಕೇಂದ್ರ ಸರ್ಕಾರದ ಆಯೋಗವು ಸಹ ಹೂಡಿಕೆ ತೀರುವಳಿ ನೀಡಿರುತ್ತದೆ.

ಮುಡಬಾಳ ಶಾಖಾ ಕಾಲುವೆ ಕಿ.ಮೀ. 0.00 ರಿಂದ 50.80 ರವೆರಗಿನ ಮುಖ್ಯ ಕಾಲುವೆ ಆಧುನೀಕರಣ ಕಾಮಗಾರಿಯನ್ನು ಮೆ:ಎ.ಕೆ.ಆರ್. ಕನ್ಸ್ಟ್ರಕ್ಷನ್ಸ್ ಲಿಮಿಟೆಡ್, ಹೈದರಾಬಾದ್, ಗುತ್ತಿಗೆದಾರರು ಇವರಿಗೆ `139.20 ಕೋಟಿ ಟೆಂಡರ್ ಮೊತ್ತಕ್ಕೆ ಹಾಗೂ ಇಂಡಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 64.00 ರವರೆಗಿನ ಮುಖ್ಯ ಕಾಲುವೆ ಆಧುನೀಕರಣ ಕಾಮಗಾರಿಯನ್ನು ಮೆ:ಎಲ್ & ಟಿ ಲಿಮಿಟೆಡ್, ಬೆಂಗಳೂರು, ಗುತ್ತಿಗೆದಾರರಿಗೆ `272.14 ಕೋಟಿ ಟೆಂಡರ್ ಮೊತ್ತಕ್ಕೆ ವಹಿಸಲಾಗಿರುತ್ತದೆ.

ಪ್ರಸ್ತಾಪಿತ ಆಧುನೀಕರಣದ ಕಾಮಗಾರಿಗಳಿಗಾಗಿ ಟೆಂಡರ್ ಅಧಿ ಸೂಚನೆಯಡಿ ತಾಂತ್ರಿಕ ಬಿಡ್ಡುಗಳ ಪೂರ್ವ ಅರ್ಹತೆಗಾಗಿ ಕೆಲವು ಷರತ್ತು/ ನಿಬಂಧನೆಗಳನ್ನು ವಿಧಿಸಲಾಗಿತ್ತು ಹಾಗೂ ಇದಕ್ಕನುಗುಣವಾಗಿ ಟೆಂಡರ್‌ನಡಿ ಭಾಗವಹಿಸಿದ ಗುತ್ತಿಗೆದಾರರುಗಳು ಇ–ಪೋರ್ಟಲ್‌ನಡಿ ಅಗತ್ಯ ದಾಖಲಾತಿ ಗಳನ್ನು ಸಲ್ಲಿಸಿದ್ದು, ಅವುಗಳನ್ನು ತಾಂತ್ರಿಕ ಬಿಡ್ ಮೌಲ್ಯಮಾಪನಾ ಹಂತದಲ್ಲಿ ವಿವರವಾಗಿ ಪರಿಶೀಲಿಸಲ್ಪಟ್ಟಿರುತ್ತದೆ. ದಿನಾಂಕ 29.01.2014 ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 6ನೇ ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರುಗಳು ಸಲ್ಲಿಸಿದ ತಾಂತ್ರಿಕ ಬಿಡ್ ದಾಖಲಾತಿಗಳು ಟೆಂಡರ್ ಕಾಮಗಾರಿಗಾಗಿ ನಿಗಧಿಪಡಿಸಿದ ಪೂರ್ವಾರ್ಹತೆ ನಿಬಂಧನೆಗಳಾನುಸಾರ ಇರುವುದನ್ನು ಪರಾಮರ್ಶಿಸಿ, ಪರಿಶೀಲಿಸಿ ಕೇವಲ ಅರ್ಹ ಗುತ್ತಿಗೆದಾರರುಗಳ ತಾಂತ್ರಿಕ ಬಿಡ್ಡುಗಳನ್ನು ಅರ್ಹಗೊಳಿಸಿ ಶಿಫಾರಸ್ಸು ಮಾಡಿರುತ್ತದೆ. ತದನಂತರ ಅರ್ಹ ಗುತ್ತಿಗೆದಾರರುಗಳು ಸಲ್ಲಿಸಿದ ಆರ್ಥಿಕ ಬಿಡ್‌ಗಳನ್ನು ದಿನಾಂಕ 10.02.2014 ರಂದು ಜರುಗಿದ ನಿಗಮದ 7ನೇ

ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಚರ್ಚಿಸಲ್ಪಟ್ಟು ಸದರಿ ಸಮಿತಿಯ ಶಿಫಾರಸ್ಸಿನ ಮೇರೆಗೆ ದಿನಾಂಕ 13.02.2014 ರಂದು ಜರುಗಿದ ನಿಗಮದ 96ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಾಮರ್ಶಿಸಲ್ಪಟ್ಟು ಕಡಿಮೆ ದರ ಅರ್ಹ ಗುತ್ತಿಗೆದಾರರುಗಳಿಗೆ ಕಾಮಗಾರಿಗಳನ್ನು ವಹಿಸಲಾಗಿರುತ್ತದೆ.

ಮುಡಬಾಳ ಶಾಖಾ ಕಾಲುವೆ ಕಿ.ಮೀ. 0.00 ರಿಂದ 50.80 ಹಾಗೂ ಇಂಡಿ ಶಾಖಾ ಕಿ.ಮೀ. 0.00 ರಿಂದ 64.00 ರವರೆಗಿನ ಮುಖ್ಯ ಕಾಲುವೆ ಆಧುನೀಕರಣ ಕಾಮಗಾರಿಗಳು ಟೆಂಡರ್ ಸ್ಪೆಸಿಫಿಕೇಷನ್‌ಗೆ ಅನುಗುಣವಾಗಿ ನಿರ್ವಹಿಸಲಾಗುತ್ತಿದ್ದು, ಕಾಮಗಾರಿಯ ನಿರ್ವಹಣೆಯ ಪ್ರತಿ ಹಂತದಲ್ಲಿ ಗುಣನಿಯಂತ್ರಣ ವಿಭಾಗದಿಂದಲೂ ಹಾಗೂ ಇದಕ್ಕಾಗಿ ಪ್ರತ್ಯೇಕವಾಗಿ ನೇಮಿಸಲ್ಪಟ್ಟ 3ನೇ ತಂಡ ಗುಣ ನಿಯಂತ್ರಣ ತಪಾಸಣೆಯನ್ನು ನಿಗಮದ ಗುಣನಿಯಂತ್ರಣ ಕನ್ಸಲ್‌ಟೆಂಟ್ ಗಳಿಂದಲೂ (3rd Party QC consultants) ಪರಿವೀಕ್ಷಣೆಗೆ ಒಳಪಡಿಸಲಾಗುತ್ತಿದೆ. ಸದರಿ ಗುಣನಿಯಂತ್ರಣ ಪರೀಕ್ಷಣೆಯ ತೃಪ್ತಿಕರ ವರದಿಗಳನ್ನು ಆಧರಿಸಿಯೇ ನಿರ್ಮಿತ ಆಧುನೀಕರಣ ಕಾಮಗಾರಿ ಭಾಗಗಳ ಬಿಲ್ಲುಗಳನ್ನು ಪಾವತಿಗೆ ಪರಿಗಣಿಸಲಾಗುತ್ತಿದೆ. ದಿನಾಂಕ: 30/06/2014 ರವರೆಗೆ ಮುದಬಾಳ ಶಾಖಾ ಕಾಲುವೆಯ ಆಧುನೀಕರಣ ಸಂಬಂಧಿಸಿದಂತೆ 3ನೇ ತಂಡದಿಂದ (3rd Party QC consultants) ಸುಮಾರು 28,000 ಗುಣ ನಿಯಂತ್ರಣ ಪರೀಕ್ಷೆಗಳನ್ನು ಮಾಡಲಾಗಿರುತ್ತದೆ. ಹಾಗೂ ಇಂಡಿ ಶಾಖಾ ಕಾಲುವೆಯ 3ನೇ ತಂಡ ಇಲ್ಲಿಯವರೆಗೆ ಸುಮಾರು 38,000 ಪರೀಕ್ಷೆಗಳನ್ನು ಮಾಡಲಾಗಿರುತ್ತದೆ. ಈ ರೀತಿ 3ನೇ ತಂಡದಿಂದ ಗುಣ ನಿಯಂತ್ರಣ ಪರೀಕ್ಷೆಯನ್ನು ನಿಗಮದಡಿಯ ಗುಣ ನಿಯಂತ್ರಣ ವಿಭಾಗದಿಂದ ಮಾಡಿಕೊಂಡಿರುವ ಪರೀಕ್ಷೆ ಅಲ್ಲದೆ ಕೈಗೊಳ್ಳಲಾಗಿರುತ್ತದೆ. ನಿಗಮದಡಿ ಗುಣ ನಿಯಂತ್ರಣ ವಿಭಾಗಗಳನ್ನು ಈ ಆಧುನೀಕರಣ ಕಾಮಗಾರಿಯ ಗುಣ ನಿಯಂತ್ರಣಕ್ಕಾಗಿ ` 200 ಕೋಟಿಗಳ ಮೊತ್ತದಲ್ಲಿ ಆಧುನೀಕರಣ ಸಹ ಮಾಡಿಕೊಳ್ಳಲಾಗಿರುತ್ತದೆ.

ಇದಲ್ಲದೇ, ನುರಿತ ತಾಂತ್ರಿಕ ತಜ್ಞರು ಹಾಗೂ ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಸದಸ್ಯರುಗಳನ್ನು ಒಳಗೊಂಡ ಸಮಿತಿಯೊಂದನ್ನು

ಸಹ ರಚಿಸಿದ್ದು (ಎನ್‌ಎಲ್‌ಬಿಸಿ–ಇಆರ್‌ಎಂ ಸಮಿತಿ), ಸದರಿ ಸಮಿತಿಯಿಂದ ಪ್ರಸ್ತುತ ಕೈಗೆತ್ತಿಕೊಂಡು ಅನುಷ್ಠಾನಗೊಳಿಸುತ್ತಿರುವ ಆಧುನೀಕರಣದ ಕಾಮ ಗಾರಿಗಳ ಸಮರ್ಪಕ ನಿರ್ವಹಣೆಯನ್ನು ಕಾಲಕಾಲಕ್ಕೆ ತಪಾಸಣೆಗೆ ಒಳಪಡಿಸ ಲಾಗುತ್ತಿದೆ ಹಾಗೂ ಆಧುನೀಕರಣ ಕಾಮಗಾರಿಯ ನಿರ್ವಹಣೆ ಹಂತದಲ್ಲಿ ಸದರಿ ಸಮಿತಿಯು ನೀಡುವ ಸೂಕ್ತ ತಾಂತ್ರಿಕ ಸಲಹೆ ಮತ್ತು ಗುಣಮಟ್ಟದ ಬಗ್ಗೆ ಸಲಹೆಗಳನ್ನು ಅಳವಡಿಸಿಕೊಂಡು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಈ ಎನ್‌ಎಲ್‌ಬಿಸಿ–ಇಆರ್‌ಎಂ ಸಮಿತಿಯ ಸದಸ್ಯರು ಗಳು, ನಿಮಗದ ಅಧಿಕಾರಿಗಳಲ್ಲದೆ ಭಾರತೀಯ ತಾಂತ್ರಿಕ ವಿಜ್ಞಾನ ಸಂಸ್ಥೆ, ಕಾನ್ಪುರ್ ಇವುಗಳ ತಾಂತ್ರಿಕ ಪರಿಣಿತರಲ್ಲದೆ ಇತರ ಸಂಸ್ಥೆಗಳಿಂದ ಪರಿಣಿ ತರಾಗಿರುತ್ತದೆ. ಈ ಸಮಿತಿಯ ಪ್ರಾರಂಭದಿಂದ ಇಲ್ಲಿಯವರೆಗೂ 8 ಸಭೆಗಳನ್ನು ಸೇರಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತಾಪಿತ ಆಧುನೀ ಕರಣದ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದೊಂದಿಗೆ ನಿರ್ವಹಿಸಲಾಗು ತ್ತಿದ್ದು, ಗುತ್ತಿಗೆದಾರರಿಗೆ ಅವರು ನಿರ್ವಹಿಸಿರುವ ಕಾಮಗಾರಿಗೆ ಹಣ ಪಾವತಿಯನ್ನು ಬಿಡುಗಡೆ ಮಾಡದಂತೆ ತಡೆಯುವ ಪ್ರಮೇಯ ಉದ್ಭವಿಸು ವುದಿಲ್ಲ.

ಶ್ರೀ ಗುರು ಪಾಟೀಲ್ ಶಿರವಾಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರವನ್ನು ಓದಿದ್ದೇನೆ. ಇನ್ನೊಂದಿಷ್ಟು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ನಾನು ಎರಡು ದಿವಸಗಳ ಕೆಳಗೆ Executive Engineer ಜೊತೆಗೆ ಸ್ಥಳ ವೀಕ್ಷಣೆಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಅಲ್ಲಿ ನಡೆ ದಿರತಕ್ಕಂಥ ಎಲ್ಲಾ ವಿಚಾರದ ಬಗ್ಗೆ ಹೇಳುತ್ತೇನೆ. ತಾವು ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ, ಸುಮಾರು 2800 ಗುಣ ನಿಯಂತ್ರಣ ಪರೀಕ್ಷೆಗಳನ್ನು ಮಾಡಲಾಗಿ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಆಧುನೀಕರಣ ಕಾಮಗಾರಿ ಗಳನ್ನು ಉತ್ತಮ ಗುಣಮಟ್ಟದೊಂದಿಗೆ ನಿರ್ವಹಿಸಲಾಗುತ್ತಿದ್ದು, ಗುತ್ತಿಗೆದಾರರಿಗೆ ಅವರು ನಿರ್ವಹಿಸುವ ಕಾಮಗಾರಿಯ ಹಣವನ್ನು ಪಾವತಿ ಮಾಡದಂತೆ ತಡೆಯುವ ಪ್ರಮೇಯವೇ ಉದ್ಭವಿಸುವಿಸುವುದಿಲ್ಲ ಎಂದು ಹೇಳಿದ್ದಿರಿ. ಇದು

135 ಕೋಟಿ ರೂ.ಗಳ ಕಾಮಗಾರಿ. ಅಲ್ಲಿ ನಡೆದಿರತಕ್ಕ ಕೆಲಸಕ್ಕೆ ಕೇವಲ ಅವರು ಖರ್ಚು ಮಾಡಿರುವುದು 10 ಕೋಟಿ ರೂ.ಗಳು ಮಾತ್ರ. ಅಷ್ಟು ಕಳಪೆ ಮಟ್ಟದ ಕಾಮಗಾರಿ ಕೆಲಸ ಇವತ್ತು ಅಲ್ಲಿ ಮಾಡಿದ್ದಾರೆ. ದಯಮಾಡಿ ಅದರ ಫೋಟೋಗಳು ಇವೆ ಮತ್ತು ಅಲ್ಲಿರತಕ್ಕಂಥ Executive Engineer ನನ್ನ ಜೊತೆಗೆ ಬಂದಿದ್ದರು, ಆ Executive Engineer ಮಾಧ್ಯಮ ಮಿತ್ರರಿಗೆ ಹೇಳಿಕೆ ಯನ್ನು ಸಹ ಕೊಟ್ಟಿದ್ದಾರೆ. ಇದೆಲ್ಲಾ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದೆ ಎಂದು ಸ್ವತ: Executive Engineer ರವರು ಹೇಳಿಕೆ ಕೊಟ್ಟಿದ್ದಾರೆ. ಅದಕ್ಕಾಗಿ ದಯಮಾಡಿ ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ಯಾವುದೇ ಕಾರಣಕ್ಕೂ ಲೋಕಾಯುಕ್ತ enquiry ಆಗುವವರೆಗೂ, ಅದರ report ಬರುವವರೆಗೂ, ಅವರಿಗೆ ಯಾವುದೇ ರೀತಿಯ payment ಆಗಬಾರದು. ಆ ಗುತ್ತಿಗೆದಾರರಿಗೆ payment ಆದರೆ, ನಮ್ಮ ರೈತರಿಗೆ ಎಂದೂ ನಾವು ನ್ಯಾಯ ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ.ಬಿ.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು: ಅದೇನು ಎನ್ನುವುದನ್ನು ಸ್ವಲ್ಪ ನೋಡಿ.

ಶ್ರೀ ಪಿ. ರಾಜೀವ್: ಈಗಾಗಲೇ Executive Engineer ರವರೇ ಆ ಕಳಪೆ ಕಾಮಗಾರಿ ಬಗ್ಗೆ ಹೇಳಿದ್ದಾರೆ. ಹೀಗಿರುವಾಗ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿದರೆ ರೈತರಿಗೆ ಅನ್ಯಾಯವಾಗುತ್ತದೆ.

ಶ್ರೀ ಬಿ.ಆರ್.ಪಾಟೀಲ್: ನಾನೂ ಸಹ ಆ ಜಿಲ್ಲೆಯಿಂದ ಬಂದವನೇ ಆಗಿದ್ದೇನೆ. ಪತ್ರಿಕೆಗಳಲ್ಲಿ ಬಹಳ ಕೆಟ್ಟದಾಗಿ ಬಂದಿದೆ. ದಯಮಾಡಿ ಇಲಾಖೆಗೆ ಒಳ್ಳೆಯ ಹೆಸರು ಬರಬೇಕಾದರೆ ಇದನ್ನು ಲೋಕಾಯುಕ್ತಕ್ಕೆ ಹಾಕಿ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ closure period works ಬಗ್ಗೆ ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಅವರು ನನ್ನ ಕೂಡ ಚರ್ಚೆಯನ್ನೂ ಮಾಡಿದ್ದಾರೆ. ಈ ಮುಡಬಾಳ ಮತ್ತು ಇಂಡಿ branch canal ಎರಡರ photographs ಅನ್ನೂ ಸಹ ಅವರು ನನಗೆ ತೋರಿಸಿ ದ್ದಾರೆ. ನಾನು ಈಗಾಗಲೇ ಅವರಿಗೆ ಹೇಳಿದ್ದೇನೆ ಮತ್ತು ಆ payment ಅನ್ನು

ಮಾಡಬಾರದು ಎಂದು ಈ ಬಗ್ಗೆ note ಅನ್ನೂ ಕೂಡ ಬರೆದಿದ್ದೇನೆ. ಇದನ್ನು third party ಯಿಂದ inspection ಮಾಡಿಸಿ, certify ಮಾಡಿ, quantify ಮಾಡಿ, ಆ ಬಗ್ಗೆ ನೋಡುತ್ತೇನೆ. ಈ ಬಗ್ಗೆ ಈಗಾಗಲೇ ಮಾನ್ಯ ಶಾಸಕರಿಗೆ ಇದನ್ನು ಹೇಳಿದ್ದೇನೆ. ಆ ಪ್ರಕಾರ ನಾನು ಕ್ರಮ ತೆಗೆದುಕೊಳ್ಳುತ್ತೇನೆ. Third party inspection ಮಾಡಿಸಿ, ಎಷ್ಟು ಕೆಲಸ ಆಗಿದೆ ಎಂಬುದನ್ನು ನೋಡಿ, ಅದರಲ್ಲಿ ಕಳಪೆ ಕಾಮಗಾರಿಯಾಗಿದ್ದರೆ, ಅದನ್ನು re-modify ಮಾಡಿಸಿ ಅದನ್ನು ಸರಿಮಾಡಿಸುವಂತಹ ಕೆಲಸ ಮಾಡಿಸುತ್ತೇನೆ. ಅದನ್ನು ಮಾಡದಿದ್ದರೆ ಅದನ್ನು delete ಮಾಡಿ ಆ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಬಿ.ಆರ್.ಪಾಟೀಲ್: Quality control ನವರ ಮೇಲೆ ಏನು action ತೆಗೆದುಕೊಳ್ಳುತ್ತೀರಿ? ಏಕೆಂದರೆ ಇಂತಹ ಕಳಪೆ ಕೆಲಸಕ್ಕೆ ಅವರು certify ಮಾಡಿದ್ದಾರೆ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಬಗ್ಗೆ third party ಯವರಿಂದ ನಾನು ಸಂಪೂರ್ಣವಾಗಿ verify ಮಾಡಿಸಿ ಅದನ್ನು ಮಾಡಿಸಿ ಕೊಡುತ್ತೇನೆ.

11.ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದ ಮೈಸೂರು ನಗರದ ಎನ್.ಟಿ.ಎಂ ಶಾಲೆಯನ್ನು ವಿವೇಕಾನಂದ ಟ್ರಸ್ಟ್‌ನ ರಾಮಕೃಷ್ಣ ಆಶ್ರಮಕ್ಕೆ ವಹಿಸಿಕೊಡುವ ಬಗ್ಗೆ.

ಶ್ರೀ ಸಾ.ರಾ.ಮಹೇಶ್ (ಕೆ.ಆರ್.ನಗರ): ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದ ಮೈಸೂರು ನಗರದ ಎನ್.ಟಿ.ಎಂ. ಶಾಲೆಯನ್ನು ವಿವೇಕಾನಂದ ಟ್ರಸ್ಟ್‌ನ ರಾಮಕೃಷ್ಣ ಆಶ್ರಮಕ್ಕೆ ವಹಿಸಿಕೊಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ. ಹಿಂದಿನ ಅಧಿವೇಶನದಲ್ಲೇ ಅದನ್ನು ವಹಿಸಬಾರದೆಂದು ನಾನು ಮನವಿ ಮಾಡಿದ್ದೆ. ಅದರಂತೆ ನೀವು ತೀರ್ಮಾನ ತೆಗೆದುಕೊಂಡಿರುವುದಕ್ಕೆ ಅಭಿನಂದಿಸುತ್ತೇನೆ. ಆದರೆ ಆ ಆಸ್ತಿಯನ್ನು ಆದಷ್ಟು ಬೇಗ ಸರ್ಕಾರದ ಹೆಸರಿಗೆ ವಾಪಸ್ ತೆಗೆದುಕೊಂಡು

ರಾಮಕೃಷ್ಣ ಆಶ್ರಮದವರಿಗೆ ಬೇರೆ ಕಡೆ ಸಿಎ ನಿವೇಶನ ಕೊಡಬೇಕೆಂದು ಅಧ್ಯಕ್ಷರ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಅಧ್ಯಕ್ಷರೆ. ಎಂಥ ಅನಾಹುತಗಳಾಗುತ್ತವೆಂದರೆ, ಒಂದು ಸರ್ಕಾರವಿದ್ದಾಗ ಒಂದು ಸರ್ಕಾರಿ ಶಾಲೆಗೆ ಮತ್ತು ಅದಕ್ಕೆ ಸೇರಿದ ಆವರಣವನ್ನು ಆ ಸಂಸ್ಥೆಗೆ ಕೊಡಬಹುದೆಂದು ಆದೇಶ ಮಾಡುತ್ತಾರೆ, ಈ ಸರ್ಕಾರ ಬಂದ ಮೇಲೆ ಸಾ.ರಾ.ಮಹೇಶ್, ಮತ್ತು ನಮ್ಮೆಲ್ಲರ ಕೋರಿಕೆಯ ಮೇರೆಗೆ ಆದೇಶವನ್ನು ರದ್ದು ಮಾಡಿ ಸರ್ಕಾರಿ ಶಾಲೆ ಸರ್ಕಾರಿ ಶಾಲೆಯಾಗಿ ಮುಂದುವರೆಯಬೇಕು ಎಂದು ಆದೇಶವನ್ನು ಮಾಡಿದ್ದಾರೆ. ಹಿಂದೆ ಮಾಡಿದ ಆದೇಶದನುಗುಣವಾಗಿ ಕೋರ್ಟಿನ ಮೆಟ್ಟಿಲೇರಿದ್ದಾರೆ. ದಯಮಾಡಿ ನಿಮ್ಮಲ್ಲಿ ಮನವಿ ಮಾಡುವು ದೇನೆಂದರೆ, ನಮ್ಮ ಸರ್ಕಾರಿ ವಕೀಲರ ಗಮನಕ್ಕೆ ತಂದು ಯಾವ ಕಾರಣಕ್ಕೂ ಅಂಥ ಖಾಸಗಿ ಸಂಸ್ಥೆಗಳಿಗೆ ಕೊಡಕೂಡದು.

ಶ್ರೀ ಸಿ.ಟಿ.ರವಿ: ನೋಂದಣಿ, ರಿಜಿಸ್ಟ್ರೇಷನ್ ರದ್ದಾಗಿಲ್ಲ.

ಅಧ್ಯಕ್ಷರು: ನೋಡಿ ಅವರು ಆದೇಶವನ್ನು ಮಾಡಿದ್ದಾರೆ.

ಶ್ರೀ ಎಸ್.ಚಿಕ್ಕಮಾದು: ಸ್ಮಾರಕ ಭವನದಲ್ಲಿ ವಿವೇಕಾನಂದರದ್ದು ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ, ಮೈಸೂರು ನಗರದಲ್ಲಿ ಅವರಿಗೊಂದು ನಿವೇಶನ ಕೊಟ್ಟು ಮಾಡಿ. ಸರ್ಕಾರಿ ಶಾಲೆ ಮತ್ತು ಅದರ ಆವರಣ ಕೋಟ್ಯಂತರ ಬೆಲೆ ಬಾಳುತ್ತದೆ.

ಡಾ.ಹೆಚ್.ಸಿ.ಮಹದೇವಪ್ಪ(ಮಾನ್ಯ ಲೋಕೋಪಯೋಗಿ ಸಚಿವರು (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ ಮೈಸೂರಿನ ನಾರಾಯಣ ಶಾಸ್ತ್ರೀ ರಸ್ತೆಯಲ್ಲಿರುವ ವಿವೇಕ ಸ್ಮಾರಕದ ಪಕ್ಕದಲ್ಲಿರುವ ಎನ್.ಟಿ.ಎಂ ಶಾಲಾ ಕಟ್ಟಡ ಹಾಗೂ ಆವರಣ ಮತ್ತು ಅದಕ್ಕೆ ಹೊಂದಿಕೊಂಡಿರುವ ಬಿ.ಆರ್.ಸಿ. ಕಟ್ಟಡ ಹಾಗೂ ಆವರಣಗಳನ್ನು ಒಳಗೊಂಡಂತೆ ಒಟ್ಟು 36591.66 ಚದರ ಅಡಿಯಷ್ಟು ಜಾಗವನ್ನು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕದ ಸ್ಥಾಪನೆಗಾಗಿ ಕಲ್ಕತ್ತಾದ ಬೇಲೂರು ಮಠದಲ್ಲಿರುವ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್

ಈ ಸಂಸ್ಥೆಗೆ ಉಚಿತವಾಗಿ ಹಸ್ತಾಂತರಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 771 ಎಲ್‌ಐಬಿ 2012, ದಿನಾಂಕ: 09/01/2013ರಂದು ಆದೇಶ ಹೊರಡಿಸಿದೆ. ಅದರಂತೆ ಸದರಿ ಶಾಲೆಯ ಸ್ಥಳವನ್ನು ದಿನಾಂಕ 15/03/2013ರಂದು ಮೈಸೂರಿನ ಮಹಾರಾಣಿ ಎನ್.ಟಿ.ಎಂ. ಶಾಲೆಯನ್ನು ಕಲ್ಕತ್ತಾದ ಬೇಲೂರು ಮಠದ ಶ್ರೀ ರಾಮಕೃಷ್ಣ ಮಿಷನ್ ಸಂಸ್ಥೆ, ಇವರಿಗೆ ವಿವೇಕ ಸ್ಮಾರಕ ಸ್ಥಾಪನೆಗಾಗಿ ಉಚಿತವಾಗಿ ಹಸ್ತಾಂತರಿಸಲಾಗಿದೆ. ಹಾಗೂ ಅದರಂತೆ ಎನ್.ಟಿ. ಎಂ. ಶಾಲೆಯ ವಿದ್ಯಾರ್ಥಿಗಳನ್ನು ಶಿವರಾಮ ಪೇಟೆಯ ದೇವರಾಜ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ವಿಲೀನಗೊಳಿಸಿ ಆದೇಶಿಸಲಾಗಿತ್ತು.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ದಿನಾಂಕ 31/05/2014 ರಲ್ಲಿ ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚದಿರುವುದು ಸರ್ಕಾರದ ಆಶಯವಾಗಿರುವುದರಿಂದ ಎನ್.ಟಿ.ಎಂ. ಶಾಲೆಯನ್ನು ಸದರಿ ಸ್ಥಳದಲ್ಲಿಯೇ ಮುಂದುವರೆಸಲು ಹಾಗೂ 2014–15ನೇ ಸಾಲಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ಶಾಲೆಯನ್ನು ಮುಂದುವರೆಸಲು ಅಗತ್ಯ ಕ್ರಮವಹಿಸುವಂತೆ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಇವರಿಗೆ ಸೂಚಿಸಿರುತ್ತಾರೆ.

ಈ ಮಧ್ಯೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 24069–71/2014(GM) ದಾಖಲಾಗಿದ್ದು ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ. ಮಾನ್ಯ ಅಡ್ವೋಕೇಟ್ ಜನರಲ್ ರವರು ಪರ್ಯಾಯ ವ್ಯವಸ್ಥೆ ಮಾಡಲು ತಿಳಿಸಿದ್ದು, ಅದರಂತೆ ರಾಮಕೃಷ್ಣಾಶ್ರಮದ ಅಧ್ಯಕ್ಷರಿಗೆ ಹಾಗೂ ಇತರ ಪ್ರತಿನಿಧಿಗಳಿಗೆ ಪರ್ಯಾಯ ವ್ಯವಸ್ಥೆ ಬಗ್ಗೆ ಅವರುಗಳ ಅಭಿಪ್ರಾಯ/ ಮಾಹಿತಿ ನೀಡಲು ಕೋರಲಾಗಿದೆ. ಮಾಹಿತಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ಅದರ ನೋಂದಾವಣೆಯನ್ನು ರದ್ದು ಮಾಡಿ ಅದನ್ನು ಸರ್ಕಾರಕ್ಕೆ ವಾಪಸ್ ತೆಗೆದುಕೊಂಡು ಅವರಿಗೆ

ಬೇರೆ ಕಡೆ ಸಿ.ಎ ನಿವೇಶನವನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಡಾ.ಹೆಚ್.ಸಿ.ಮಹದೇವಪ್ಪ: ಈಗ ಮಾನ್ಯ ಅಡ್ವೊಕೇಟ್ ಜನರಲ್ ಅವರನ್ನು ಕರೆದು ನೀವು ಪರ್ಯಾಯವಾಗಿ ಏನೇನು ಮಾರ್ಗೋಪಾಯಗಳಿವೆ ಎಂದು ಚರ್ಚೆ ಮಾಡಿ, ಸೂಚನೆ ಕೊಟ್ಟಿದ್ದಾರೆ, ಇದು ನ್ಯಾಯಾಂಗದ ಮುಂದೆ ಕೂಡ ಇದೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ [ಕಂದಾಯ ಮಂತ್ರಿಗಳು]: ರಾಮಕೃಷ್ಣ ಆಶ್ರಮದವರು ಕೋರ್ಟ್ ಮುಂದೆ ಹೋಗಿದ್ದಾರೆ, ಕ್ಯಾಬಿನೆಟ್ ಡಿಸಿಷನ್ ಆಗಿ ಡೈರೆಕ್ಷನ್ ಕೊಟ್ಟು ಖಾತೆ ವಗೈರೆ ಎಲ್ಲಾ ಆಗಿದೆ, ಈ ಸರ್ಕಾರ ಪ್ರಶ್ನೆ ಮಾಡಿದೆ ಹಾಗಾಗಿ ಅವರು ಹಿಂದಿನ ಸರ್ಕಾರದಲ್ಲೇನಾಗಿದೆ ಅದರ ಪ್ರಕಾರ ನಮ್ಮ ವಶಕ್ಕೆ ಕೊಡಿ ಎನ್ನುತ್ತಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಕೊಡುವುದಕ್ಕಾಗುವುದಿಲ್ಲ. ಆ ಜಾಗವನ್ನು ಉಳಿಸಿಕೊಳ್ಳಬೇಕೆಂದಿದ್ದೇವೆ, The matter is before the court. ಈ ವಿಷಯವನ್ನು ಚರ್ಚೆ ಮಾಡುವುದರಿಂದ Sub-judice ಆಗಬಹುದು, ಈ ವಿಷಯವನ್ನು ಇಲ್ಲಿಗೇ ನಿಲ್ಲಿಸಬೇಕು.

ಶ್ರೀ ವಾಸು: ಅಷ್ಟೇ ಅಲ್ಲ, ಅದಕ್ಕೆ ಖಾತೆನೂ ಆಗಿದೆ, ಕಂದಾಯನ್ನೂ ಕಟ್ಟಿದ್ದಾರೆ, ಪ್ಲ್ಯಾನೂ ಮಂಜೂರಾಗಿದೆ, ಪೊಸೆಷನ್ ಕೇಳುವ ಸಂದರ್ಭದಲ್ಲಿ ಈ ಜಿಜ್ಞಾಸೆ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಿಯಮ 69ರಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದು.

ಅಧ್ಯಕ್ಷರು: ಈಗ ನೀವು ಕೊಟ್ಟಿರುವ ವಿಷಯ ಬರಕ್ಕೆ ಸಂಬಂಧಿಸಿದ್ದು, ಈಗ ನಾವು ಕಂದಾಯ ಇಲಾಖೆ ಬೇಡಿಕೆಯ ಮೇಲೆ ಚರ್ಚೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಇದು ಬರಕ್ಕೆ ಸಂಬಂಧಿಸಿದ್ದು. ಅದಕ್ಕೆ ನಾನು ನಿಯಮ 69ರಲ್ಲಿ ಚರ್ಚೆಗೆ ಅವಕಾಶ ಕೇಳಿರುವುದು, ಅದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಿ,

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡುವುದರಿಂದ ಇದನ್ನು ಪ್ರತ್ಯೇಕವಾಗಿ ಏತಕ್ಕೆ ತೆಗೆದುಕೊಳ್ಳಬೇಕು? ಸಮಗ್ರವಾಗಿ ಈ natural calamility ಬಗ್ಗೆ ಮಾತನಾಡುವಾಗ ಬರದ್ದೂ ಚರ್ಚೆ ಮಾಡಬಹುದು.

ಅಧ್ಯಕ್ಷರು: ಅದನ್ನೇ ನಾನು ಅವರಿಗೆ ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್: ನಾನು ಒಪ್ಪಿಕೊಳ್ಳುತ್ತೇನೆ, ಅದು ಜನರಲ್ ಆಗಿ ಮಾತನಾಡುವುದಾಗುತ್ತದೆ, ನಿರ್ದಿಷ್ಟವಾಗಿ ಮಾತನಾಡಿ ಇವತ್ತಿನ ಪರಿಸ್ಥಿತಿಯನ್ನು ಹೇಳಬೇಕಲ್ಲ? ನಾವು ಇಲ್ಲಿ ಕಂದಾಯ ಇಲಾಖೆ ನೂರು ವರ್ಷದ ಕತೆ ಹೇಳಬಹುದು. ತಕ್ಷಣ ಬರಗಾಲಕ್ಕೆ ರಿಲೀಫ್ ಬೇಕಲ್ಲ.

ಅಧ್ಯಕ್ಷರು: ಇವತ್ತು ಕಂದಾಯ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಇಲ್ಲದೇ ಹೋಗಿದ್ದರೆ ಇವತ್ತು ನಾನು ಈ ಪ್ರಸ್ತಾಪವನ್ನು ಇಡುತ್ತಿರಲಿಲ್ಲ. ನಿಮಗೆ ಚರ್ಚೆಗೆ ಮುಕ್ತವಾದ ಅವಕಾಶವಿರುವುದರಿಂದ ಮತ್ತೆ ಪ್ರತ್ಯೇಕವಾಗಿ ಏಕೆ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್: ಬರಕ್ಕೆ ಸಂಬಂಧಿಸಿದಂತೆ ಸರ್ಕಾರ ಪ್ರತ್ಯೇಕವಾಗಿ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಎಸ್.ಆರ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಅವರು ಹೇಳುವ ವಿಷಯ ಮತ್ತು ಇಲಾಖೆಯ ವಿಷಯ ಬೇರೆಯಾಗಿರುತ್ತವೆ.

ಅಧ್ಯಕ್ಷರು: ಆಯಿತು, ನಾಳೆ ನೋಡೋಣ, ಈಗ ಪ್ರಕಟಣೆ.